1	2	3	4
	ಅರಕೇರಿ	ಮುಧೋಳ	ಮೆಟಗುಡ್ಡ
	ತಿದಗುಂಡಿ		ಕಸಬಾಜಂಬಗಿ
ಬಿಳಗಿ	ಅರಕೇರಿ	ವಜ್ರಮಟ್ಟಿ	
	ಸಿದ್ದಾಪುರ	ಮುತ್ತೂರ	
ಹುನಗುಂದ	ಹಾವರಗಿ	ಮಾಚಕನೂರ	
	ಗಂಜಿಹಾಳ	ಮಳಗಿ	
	ಹಿರೇಸಿಂಗನಗುತ್ತಿ	ಸಿಂಧಗಿ	ಗುತ್ತರಗಿ
ಇಂಡಿ	ಜಿಗಜೀವಣಗಿ		ಅಸಿಕ್ಕ
	ನೀವರಗಿ		ಯಂಕಂಚಿ
	ಬೆಳ್ಳೊಳ್ಳಿ		ಮುಳಸಾವಳಗಿ
	ಧೂಳಖೇಡ್		ಕನ್ನೊಳ್ಳಿ
	ಖೇದಗಿ		

ರಾಜ್ಯದಲ್ಲಿ ವಿದ್ಯುತ್ ಟ್ರಾನ್ಸಫಾರಂಗಳು ಸುಟ್ಟುಹೋಗಿತ್ತಿರುವುದು.

2132 - ಶ್ರೀ ಬಸನಗೌಡ ಪಾಟೀಲ (ವಿಜಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯುತ್ ಟ್ರಾನ್ಸಫಾರ್ಮರಗಳು ಅತಿಯಾದ ಹೆಚ್ಚಿನ ಭಾರದಿಂದ ಸುಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ನಿಗದಿತ ಶಕ್ತಿಗಿಂತ ಹೆಚ್ಚಿನ ವಿದ್ಯುತ್ ಸಂಪರ್ಕ ನೀಡುವ ಉದ್ದೇಶವೇನು;

ಇ) ವಿಜಾಪುರ ತಾಲ್ಲೂಕಿನಲ್ಲಿ ನಿಗದಿತ ಶಕ್ತಿಗಿಂತ ಟ್ರಾನ್ಸಫಾರ್ಮರಗಳಿಗೆ ಹೆಚ್ಚಿನ ಭಾರ ಹಾಕಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ವಿಜಾಪುರ ತಾಲ್ಲೂಕಿನಲ್ಲಿ ಟ್ರಾನ್ಸಫಾರ್ಮರಗಳು ಕಾರ್ಯ ನಿರತವಾಗಿರುವುದಷ್ಟು; ಅವುಗಳ ಶಕ್ತಿ ಸಾಮರ್ಥ್ಯವೆಷ್ಟು, ಅವುಗಳ ಮೇಲೆ ಹೆಚ್ಚಿನ ಭಾರ ಎಷ್ಟು ಹೇರಲಾಗಿದೆ (ವಿವರವನ್ನೊದಗಿಸುವುದು).

ಈ) ಈ ಟ್ರಾನ್ಸಫಾರ್ಮರಗಳು ಮೇಲಿಂದ ಮೇಲೆ ಸುಡುತ್ತಿರುವುದುರಿಂದ ರೈತರಿಗೆ ಆಗುವ ತೊಂದರೆಯ ಬಗ್ಗೆ ಸರ್ಕಾರದ ಪರಿಹಾರ ಕ್ರಮಗಳೇನು;

ಊ) ಮಹಾರಾಷ್ಟ್ರ ರಾಜ್ಯ ವಿದ್ಯುತ್ ನಿಗಮದ ಕಾನೂನಿನನಂತೆ ಟ್ರಾನ್ಸ್‌ಫಾರ್ಮರನಿರ್ವಹಣೆ ಮತ್ತು ಜವಾಬ್ದಾರಿಗಳನ್ನು ಸಂಬಂಧಿಸಿದ ವಿಭಾಗ ಅಭಯಂತರರನ್ನು ಜವಾಬ್ದಾರಿ ಮಾಡಲು ಸರ್ಕಾರ ಪರಿಶೀಲಿಸುವುದೇ?

ಶ್ರೀ ಜೆ.ಹೆಚ್. ಪಾಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ಸಾಮಾನ್ಯವಾಗಿ ನಿಗದಿತ ಸಾಮರ್ಥ್ಯಕ್ಕೆ ತಕ್ಕಂತೆ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ. ಆದರೆ ಕೆಲವೊಮ್ಮೆ ಡೈವರ್ಸಿಟಿ ಫ್ಯಾಕ್ಟರನ್ನು ಪರಿಗಣಿಸಿ ವಿತರಣಾ ಟ್ರಾನ್ಸಫಾರ್ಮರಗಳು ನಿಗದಿತ ಸಾಮರ್ಥ್ಯಕ್ಕಿಂತ $1^1/_2$ ಪಟ್ಟು ಲೋಡನ್ನು ಹೊರಬೇಕಾಗುತ್ತದೆ. ಡೈವರ್ಸಿಟಿ ಫ್ಯಾಕ್ಟರನ್ನು ಗ್ರಾಮೀಣ ವಿದ್ಯುದೀಕರಣ ನಿಗಮವು ನೀಡಿರುವ ಮಾರ್ಗದರ್ಶನದ ಪ್ರಕಾರ ಪರಿಗಣಿಸಬೇಕಾಗಿದೆ. ಆದಾಗ್ಯೂ ಡೈವರ್ಸಿಟಿ ಫ್ಯಾಕ್ಟರನ್ನು ಗ್ರಾಮಾಂತರ ಪ್ರದೇಶಗಳಲ್ಲಿ 1ಕ್ಕೆ ಸೀಮಿತ ಗೊಳಿಸಲಾಗಿದೆ.

ಇ) ವಿಜಾಪುರ ತಾಲ್ಲೂಕಿನಲ್ಲಿ ವಿತರಣಾ ಟ್ರಾನ್ಸಫಾರ್ಮರಗಳ ಮೇಲೆ ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚಿನ ಭಾರವನ್ನು ಹಾಕುತ್ತಿಲ್ಲ.

ಈ) ವಿಜಾಪುರ ತಾಲ್ಲೂಕಿನಲ್ಲಿ ಆಗಸ್ಟ 95ರ ಅಂತ್ಯದವರೆಗೆ ಒಟ್ಟು 1035 ವಿತರಣಾ ಟ್ರಾನ್ಸಫಾರ್ಮರಗಳಿವೆ. ಇವುಗಳ ಒಟ್ಟು ಸಾಮರ್ಥ್ಯ 71995 ಕೆ.ವಿ.ಎ. ಯಾವ ವಿತರಣಾ ಟ್ರಾನ್ಸಫಾರ್ಮರ್ ಮೇಲೂ ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚಿನ ಭಾರವನ್ನು ಹಾಕಿಲ್ಲ.

ಕ್ರ. ಸಂ.	ವಿತರಣಾ ಟ್ರಾನ್ಸ್‌ಫಾರ್ಮರನ ಸಾಮರ್ಥ್ಯ	ಸಂಖ್ಯೆ	ಒಟ್ಟು ಸಾಮರ್ಥ್ಯ
1	25 ಕೆ.ವಿ.ಎ	335	8375 ಕೆ.ವಿ.ಎ
2	50 ಕೆ.ವಿ.ಎ	24	1200 ಕೆ.ವಿ.ಎ
3	63 ಕೆ.ವಿ.ಎ	390	24570 ಕೆ.ವಿ.ಎ
4	100 ಕೆ.ವಿ.ಎ	215	21500 ಕೆ.ವಿ.ಎ
5	200 ಕೆ.ವಿ.ಎ	30	6000 ಕೆ.ವಿ.ಎ
6	250 ಕೆ.ವಿ.ಎ	39	9750 ಕೆ.ವಿ.ಎ
7	300 ಕೆ.ವಿ.ಎ	2	600
	ಒಟ್ಟು	**1035**	**71995 ಕೆವಿಎ**

ಉ) ಜಿಜಾಪುರ ತಾಲ್ಲೂಕಿನಲ್ಲಿ ವಿತರಣಾ ಟ್ರಾನ್ಸಫಾರ್ಮರಗಳ ಮೇಲೆ ನಿಗದಿತ ಸಾಮರ್ಥ್ಯಕ್ಕಿಂತ ಕೆಚ್ಚಿನ ಭಾರವನ್ನು ಹಾಕುತ್ತಿಲ್ಲ. ಯಾವುದೇ ಕಾರಣಕ್ಕೆ ವಿತರಣಾ ಟ್ರಾನ್ಸಫಾರ್ಮರಗಳು ವಿಫಲಗೊಂಡಿಲ್ಲ

ರೈತರಿಗೆ ಆಗುವ ತೊಂದರೆಯ ನಿವಾರಣೆಗಾಗಿ ಆದಷ್ಟು ಜಾಗ್ರತೆ ಆ ವಿತರಣಾ ಟ್ರಾನ್ಸಫಾರ್ಮರನ್ನು ಒಳ್ಳೆಯ ವಿತರಣಾ ಟ್ರಾನ್ಸಫಾರ್ಮರ್ ಮೂಲಕ ಬದಲಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅಲ್ಲದೇ ವಿತರಣಾ ಟ್ರಾನ್ಸಫಾರ್ಮರಗಳ ವಿಫಲತೆಯನ್ನು ತಡೆಗಟ್ಟಲು ಎಲ್.ಟಿ.ಫ್ಯೂಸ್ ಕಿಟಗಳನ್ನು ಸಹ ಈಗ ಅಳವಡಿಸಲಾಗುತ್ತಿದೆ.

ಊ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿತರಣಾ ಟ್ರಾನ್ಸಫಾರ್ಮರಗಳ ವಿಫಲತೆ ಬಗ್ಗೆ ತೀವ್ರ ಗಮನವನ್ನು ಹರಿಸಿದ್ದು, ವಿಫಲತೆಯನ್ನು ತಡೆಗಟ್ಟುವ ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಅಗತ್ಯ ಮಾರ್ಗದರ್ಶನಗಳನ್ನು ನೀಡಿದೆ. ಮಂಡಳಿಯ ಮಾರ್ಗದರ್ಶನಗಳನ್ನು ಪಾಲಿಸದ ಕ್ಷೇತ್ರಾಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೆಂದು ಎಚ್ಚರಿಸಲಾಗಿದೆ.

ವಿಜಾಪುರ ಜಿಲ್ಲೆಯಲ್ಲಿ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳು

2133 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ಜಿಲ್ಲೆಯಲ್ಲಿ ಕಾರ್ಯ ಮಾಡುವ ನ್ಯಾಯಾಲಯಗಳು ಸಂಖ್ಯೆ ಎಷ್ಟು ? ಅವುಗಳ ಮುಂದಿರುವ ಮೊಕದ್ದಮೆಗಳೆಷ್ಟು ? ಅವುಗಳ ಮುಂದಿರುವ ಮೊಕ್ಕದ್ದಮೆಗಳೆಷ್ಟು ?

ಆ) ನ್ಯಾಯಾಲಯಗಳ ಮುಂದೆ ಇರುವ ವ್ಯಾಜ್ಯಗಳು ಬೇಗನೆ ಮುಗಿಯದೇ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಅನೇಕ ವರ್ಷಗಳಿಂದ ನ್ಯಾಯಾಲಯಗಳ ಮುಂದೆ ಬಿದ್ದಿರುವ ಪ್ರಕರಣಗಳಿಂದ ಜನ ಮುಂದೆ ಬಿದ್ದಿರುವ ಪ್ರಕರಣಗಳಿಂದ ಜನ ಸಾಮಾನ್ಯನಿಗೆ ನ್ಯಾಯ ವಿಳಂಭದಿಂದ ನ್ಯಾಯ ತಿರಸ್ಕರಿಸಿದಂತಾಗುವುದಿಲ್ಲವೆ.

ಈ) ಇಂತಿಂತ ಪ್ರಕರಣಗಳಲ್ಲಿ ನ್ಯಾಯಾಲಯದ ತೀರ್ಪು ನಿರ್ದಿಷ್ಟ ಅವಧಿಯೊಳಗೆ ತೀರ್ಪು ನೀಡುವಂತೆ ಸರಕಾರ ನಿಯಮವನ್ನಾದರೂ ತರುವ ವಿಚಾರ ಸರಕಾರದ ಪರಿಶೀಲನೆಯಲ್ಲಿದೆಯೇ,

ಉ) ಇದ್ದಲ್ಲಿ ಯಾವಾಗ (ಸಂಪೂರ್ಣ ವಿವರ ನೀಡುವುದು)

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 30. ದಿನಾಂಕ 31ನೇ ಆಗಸ್ಟ್ 1995ರಲ್ಲಿ ಇದ್ದಂತೆ 40,990 ಮೊಕದ್ದಮೆಗಳು (ಸಿವಿಲ್ ಮತ್ತು ಕ್ರಿಮಿನಲ್).

ಆ) ನ್ಯಾಯಾಲಯಗಳ ಮುಂದೆ ಬಾಕಿ ಇರುವ ವ್ಯಾಜ್ಯಗಳು ಬೇಗನೆ ಮುಗಿಯದಿದ್ದರೆ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುವುದನ್ನು ಮನಗಂಡು ವ್ಯಾಜ್ಯಗಳನ್ನು ಬೇಗನೆ ಮುಗಿಸಿ ಈ